ಅ) ಇತ್ತೀಚೆಗೆ ಪಟ್ಟಣ ಪ್ರದೇಶ ಹಾಗೂ ಗ್ರಾಮೀಣ ಪ್ರದೇಶ ವಿದ್ಯಾರ್ಥಿ ನಿಲಯಗಳಿಗೆ ವಿದ್ಯಾರ್ಥಿಗಳು ಹೆಚ್ಚಾಗಿ ಅರ್ಜಿ ಸಲ್ಲಿಸುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ, ಅದರಲ್ಲಿ ಬಹುತೇಕ ಬಡವರು ಹಾಗು ಪರಿಶಿಷ್ಟ ಜಾತಿ, ವರ್ಗಗಳಿಗೆ ಸೇರಿರವುದು, ಸರ್ಕಾರಕ್ಕೆ ತಿಳಿದಿದೆಯೇ, ಇವರಿಗೆ ಅನುಕೂಲ ಕಲ್ಪಿಸುವುದು ಸರ್ಕಾರದ ಜವಾಬ್ದಾರಿಯಲ್ಲವೇ;

ಆ) ಹಾಗಿದ್ದಲ್ಲಿ, ಸೀಟುಗಳನ್ನು ಹೆಚ್ಚು ಮಾಡಿ ಮಕ್ಕಳನ್ನು ಸೇರಿಸಲು ಈ ವರ್ಷದಿಂದಲೇ ಆದೇಶ ಹೊರಡಿಸಲಾಗುವುದೇ?

ಡಾ॥ ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) ಹೌದು

ಆ) ಬೇಡಿಕೆಗನುಗುಣವಾಗಿ ಆಯಾ ವಿದ್ಯಾರ್ಥಿ ನಿಲಯಗಳಲ್ಲಿ ಮೂಲಭೂತ ಸೌಕರ್ಯಗಳಾದ ಸ್ನಾನಗೃಹ, ಶೌಚಾಲಯ ವ್ಯವಸ್ಥೆ, ನೀರಿನ ಸೌಕರ್ಯ ಮತ್ತು ಸ್ಥಳಾವಕಾಶದ ಲಭ್ಯತೆ ಹಾಗೂ ಆಯವ್ಯಯದಲ್ಲಿ ಒದಗಿಸಿರುವ ಅನುದಾನದ ಲಭ್ಯತೆಯನ್ನು ಪರಿಶೀಲಿಸಿದ ನಂತರ ಸಂಖ್ಯಾ ಬಲ ಹೆಚ್ಚಿಸುವ ಬಗ್ಗೆ ತೀರ್ಮಾನಿಸಲಾಗುವುದು.

ಸರೋಜಿನಿಮಹಿಷೀ ವರದಿ ಜಾರಿ

೩೭೩. (ಳಶಿಲಳ) **ಶ್ರೀ ವೈಜ್ಯನಾಥ ಪಾಟೀಲ್ (ಚಿಂಚೋಳಿ) :-** ಮಾನ್ಯ ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾರಿ, ಮಧ್ಯಮ ಹಾಗೂ ಸಣ್ಣ ಕೈಗಾರಿಕೋದ್ಯಮಗಳಲ್ಲಿ ಸರೋಜಿನಿ ಮಹಿಷಿವರದಿಯನ್ನು ಪರಿಣಾಮ ಕಾರಿಯಾಗಿ ಜಾರಿಗೊಳಿಸಲಾಗಿದೆಯೇ;

ಆ) ರಾಜ್ಯದಲ್ಲಿ ಮಧ್ಯಮ ಹಾಗೂ ಸಣ್ಣ ಕೈಗಾರಿಕೋದ್ಯಮಗಳಲ್ಲಿ ಸರೋಜಿನಿ ಮಹಿಷಿ ವರಧಿ ಆಧರಿಸಿ ಆಗಿರುವ ನೇಮಕಾತಿಯ ವಿವರಗಳೇನು ; ಪೂರ್ಣ ವಿವರ ನೀಡುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ, ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು) :

ಅ) ಡಾ॥ ಸರೋಜಿನಿ ಮಹಿಷಿ ಸಮಿತಿ ವರದಿಯ ಶಿಫಾರಸ್ಸುಗಳನ್ವಯ ರಾಜ್ಯದಲ್ಲಿ ಹೊಸದಾಗಿ ಸ್ಥಾಪಿಸಲ್ಪಡುವ ಕೈಗಾರಿಕೆಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ನೀಡುವ ಕುರಿತು ಕೈಗಾರಿಕೆ ನೀತಿ ೨೦೦೧–೦೬ರಲ್ಲಿ ಈ ಕೆಳಕಂಡ ಷರತ್ತುಗಳನ್ನು ವಿಧಿಸಲಾಗಿದೆ.

"ಕಂಡಿಕೆ ೮.೬ : – ಎಲ್ಲಾ ಹೊಸ ಕೈಗಾರಿಕಾ ಬಂಡವಾಳ ಹೂಡಿಕೆಯ ಸಾಧ್ಯವಿರುವಷ್ಟು ಅತಿ ಹೆಚ್ಚಿನ ಸಂಖ್ಯೆಯಲ್ಲಿ ಹೆಚ್ಚುವರಿ ಉದ್ಯೋಗಾವಕಾಶಗಳನ್ನು ಕಲ್ಪಿಸಬೇಕಲ್ಲದೇ, ಕನಿಷ್ಟ ಶೇಕಡ ೮೦ರಷ್ಟು ಉದ್ಯೋಗವನ್ನು ಸ್ಥಳೀಯ ಜನರಿಗೆ ನೀಡತಕ್ಕದ್ದು. (ಸಿ ಮತ್ತು ಡಿ ಪ್ರವರ್ಗಗಳ ವಿಷಯದಲ್ಲಿ ಶೇಕಡ ೧೦೦ ರಷ್ಟು ಉದ್ಯೋಗ ಅವಕಾಶವನ್ನು ಸ್ಥಳೀಯ ಜನರಿಗೆ ನೀಡಬೇಕು]" ಹಾಗೂ ಉತ್ತೇಜನಗಳನ್ನು ವಿತರಣೆ ಮಾಡುವಾಗ, ಈ ವಿಚಾರದ ಮೇಲ್ವಿಚಾರಣೆ ನೋಡಿಕೊಳ್ಳತಕ್ಕದ್ದು. ಸ್ಥಳೀಯ ಜನರಿಗೆ ಉದ್ಯೋಗ ನೀಡುವ ಅವಶ್ಯಕತೆಯನ್ನು ಜಿಲ್ಲಾ ಕೈಗಾರಿಕಾ ಕೇಂದ್ರಗಳು ೫ ವರ್ಷಗಳವರೆಗೆ ಮೇಲ್ವಿಚಾರಣೆ ಮಾಡುತ್ತವೆ. ಕೈಗಾರಿಕೆಗಳು ಸ್ಥಳೀಯ ಜನರಿಗೆ ಮೇಲೆ ತಿಳಿಸಿದ ನಿಬಂಧನೆಗನು ಸಾರವಾಗಿ ಉದ್ಯೋಗ ನೀಡಲು ತಪ್ಪಿದ್ದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳನ್ನು ಅಧ್ಯಕ್ಷರಾಗಿರುವ ರಾಜ್ಯಮಟ್ಟದ ಸಮಿತಿಗೆ ತಿಳಿಸಲಾಗುವುದು. ಹಾಗೂ ಈ ಸಮಿತಿಯು ಮಂಜೂರಾದ ಬಂಡವಾಳ ಸಹಾಯ ಧನವನ್ನು ಮರುವಸೂಲಿ ಮಾಡಲು ಶಿಫಾರಸ್ಸು ಮಾಡುವುದು. ಇದಕ್ಕಾಗಿ ಸಹಾಯ ಧನವನ್ನು ವಿತರಣೆ ಮಾಡುವ ಮೊದಲು ಘಟಕಗಳಿಂದ ಮುಚ್ಚಳಿಕೆಯೊಂದನ್ನು ಪಡೆಯಲಾಗುವುದು. ಜೊತೆಯಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಜಮೀನು ಪಡೆದ ಘಟಕಗಳು ಭೂ ಸ್ವಾಧೀನದಿಂದಾಗಿ ಜಮೀನು ಕಳೆದುಕೊಂಡ ರೈತರ ಪ್ರತಿಯೊಂದು ಕುಟುಂಬದ ಒಬ್ಬ ಸದಸ್ಯರಿಗೆ ಉದ್ಯೋಗ ನೀಡಬೇಕೆಂಬ ನಿಬಂಧನೆಯನ್ನು ಸಹ ಗುತ್ತಿಗೆ ಮತ್ತು ಮಾರಾಟ ಒಪ್ಪಂದದಲ್ಲಿ ಅಳವಡಿಸಲಾಗಿದೆ.

ಆ) ೫೦ ಅಥವಾ ಅದಕ್ಕಿಂತ ಹೆಚ್ಚು ಉದ್ಯೋಗಿಗಳನ್ನು ಹೊಂದಿರುವ ಮತ್ತು ರಾಜ್ಯ ಸರ್ಕಾರ/ಸರ್ಕಾರಿ ಸಂಸ್ಥೆಗಳಿಂದ ಮೂಲಭೂತ ಸೌಕರ್ಯ ಹಾಗೂ ರಿಯಾಯಿತಿಗಳನ್ನು ಪಡೆದಿರುವ ಕೈಗಾರಿಕಾ ಘಟಕಗಳಲ್ಲಿ ಮೇಲ್ಕಂಡ ಷರತ್ತಿನ ಪಾಲನೆ ಬಗ್ಗೆ ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ಹಾಗೂ ರಾಜ್ಯಮಟ್ಟದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯವರ ಅಧ್ಯಕ್ಷತೆಯಲ್ಲಿ ಮಿತಿಗಳನ್ನು ರಚಿಸಲಾಗಿದೆ.

ಜಿಲ್ಲಾವಾರು ಘಟಕಗಳ ಸಂಖ್ಯೆ, ಒಟ್ಟು ಉದ್ಯೋಗಿಗಳು, ಕನ್ನಡಿಗರು ಮತ್ತು ಇತರರ ವಿವರಗಳನ್ನು ಒಳಗೊಂಡ ಪಟ್ಟಿಯನ್ನು ಅನುಬಂಧ–೧ ರಲ್ಲಿ ಲಗತ್ತಿಸಿದೆ.

ಡಾ॥ ಸರೋಜಿನಿ ಮಹಿಷಿ ವರದಿಯಂತೆ ಕನ್ನಡಿಗರಿಗೆ / ಸ್ಥಳೀಯರಿಗೆ ಜಿಲ್ಲಾವಾರು ಉದ್ಯೋಗ ಒದಗಿಸಿರುವ (ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಕೈಗಾರಿಕೆಗಳನ್ನು ಹೊರತುಪಡಿಸಿ) ಬಗ್ಗೆ ವಿವರಗಳು.

ಉದ್ಯೋಗಿಗಳ ವಿವರಗಳು							
ಕ್ರಸಂ	ಜಿಲ್ಲೆಗಳು	ಘಟಕಗಳು	ಕನ್ನಡಿಗರು	ಇತರರು	ಒಟ್ಟು	ಶೇಕಡ	ಡಾ॥ ಸ.ಮ.ವ ಯಂತೆ ಉದ್ಯೋಗ ನೀಡದಿರುವ ಘಟಕಗಳು
೧	ಬೆಂಗಳೂರು ನಗರ	೪೫೯	೧೨೯೪೭೭	೩೧೯೪	೧೫೩೯೭೫	೯೨	೯೪
೨	ಬೆಂಗಳೂರು (ಗ್ರಾ)	೪೭	೯೨೮೨	೭೪೧	೯೯೪೨	೯೩	೧೫
೩	ಮೈಸೂರು	೬೮	೧೫೧೬	೧೬೧೦	೧೮೩೨೬	೯೧	೫
೪	ಹಾಸನ	೧೧	೨೨೮೩	೧	೨೨೮೪	೯೯.೯೫	೦
೫	ತುಮಕೂರು	೧೮	೩೮೪೭	೨೫	೪೦೩೭	೯೪.೩೭	೦
೬	ಕೋಲಾರ	೧೫	೭೯೩೨	೧೫೭	೭೮೮೯	೯೮.೨೫	೧
೭	ಮಂಡ್ಯ	೧೧	೩೧೯೭	೩೮	೩೨೫೪	೯೮.೮೨	೨
೮	ಕೊಡಗು	೪	೪೩೪	೧೧	೪೪೫	೯೭.೫೨	೦
೯	ಚಾಮರಾಜನಗರ	೬	೬೩೭	೭	೬೪೪	೯೯೯	೦
೧೦	ಚಿಕ್ಕಮಗಳೂರು	೧೨	೨೬೩೮	೫೮೧	೩೨೧೯	೮೧.೯೫	೦
೧೧	ದಾವಣಗೆರೆ (ಪ.ಕ)	೧೯	೫೧೪೩	೪೯೨	೫೩೩೫	೯೧.೩೭	೧
೧೨	ಶಿವಮೊಗ್ಗ	೪	೬೩೦೫	೭೩	೬೩೭೮	೯೯	೨
೧೩	ಕಾರವಾರ	೧೬	೫೨೫೫	೬೭	೫೩೨೨	೯೯	೧
೧೪	ಬಿಜಾಪುರ	೩	೧೦೭೨	೧೦೯	೧೧೮೧	೯೧	೦
೧೫	ಉಡುಪಿ	೪೭	೬೯೦೨	೫	೬೯೦೭	೯೯.೯೨	೦
೧೬	ಧಾರವಾಡ	೧೨	೧೯೫೯	೧೦೮	೨೦೪೭	೯೪.೭೨	೨
೧೭	ಬಳ್ಳಾರಿ	೪	೩೭೦೭	೪೩೩	೪೧೪೦	೯೨	೧
೧೮	ಚಿತ್ರದುರ್ಗ	೪	೬೦೨	೨೨	೬೨೪	೯೬.೪೭	೨
೧೯	ಬೆಳಗಾವಿ	೨೬	೧೧೪೪೫	೭೪೨	೧೨೨೬೭	೯೪	೨
೨೦	ಗುಲಬರ್ಗಾ	೪	೩೧೯೪	೩೧೫	೩೪೦೯	೯೦.೭೫	೦
೨೧	ರಾಯಚೂರು	೭	೨೬೧೭	೯	೨೬೨೫	೯೯.೬೯	೦
೨೨	ಕೊಪ್ಪಳ	೫	೧೬೦೫	೯೫	೧೭೦೦	೯೫	೧
೨೩	ಗದಗ	೩	೧೬೫೦	೦	೧೬೫೦	೧೦೦	೦
೨೪	ಹಾವೇರಿ	೭	೪೧೬೧	೫೯	೪೨೬೦	೯೮.೬	೧
೨೫	ಬೀದರ್	೯	೨೨೧೦	೬೫	೨೨೭	೯೭.೧೪	೨
೨೬	ಬಾಗಲಕೋಟೆ	೬	೩೩೯೭	೯೪	೩೪೪೧	೯೬.೭೦	೦
೨೭	ರಾಯಚೂರು	೪	೬೯೯೭	೩೪೯	೭೩೪೬	೯೫.೨೫	೦
	ಒಟ್ಟು	೮೫೭	೨೪೩೨೩೩	೯೫೧೮	೨೫೧೦೩೩	೯೭.೦೦	೧೨೯